2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

SC/ST No. 13/2022

ಫಿರ್ಯಾದಿದಾರರು ವಿರುದ್ಧ ಆರೋಪಿತರು

| | |
|---|---|
| ರಾಜ್ಯದ ಪರವಾಗಿ ಚನ್ನಗಿರಿ ಪೋಲೀಸ್ ಠಾಣೆ, ಚನ್ನಗಿರಿ | ಎ2) ರುದ್ರಪ್ಪ ಯಾನೆ ಎಂ.ಜಿ.ರುದ್ರೇಶ ಮತ್ತು ಇನ್ನೊಬ್ಬರು. |

**ದೋಷಾರೋಪಣೆ**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ :-

ಆರೋಪಿತರಾದ- ಎ2) ರುದ್ರಪ್ಪ ಯಾನೆ ಎಂ.ಜಿ.ರುದ್ರೇಶ ತಂದೆ ಮಹೇಶ್ವರಪ್ಪ, ವಯಸ್ಸು 51 ವರ್ಷ,
ಎ3) ಮೂರ್ತೆಪ್ಪ ಯಾನೆ ಜಿ.ಎಂ.ಶಿವಮೂರ್ತಿ ತಂದೆ ಮಹೇಶ್ವರಪ್ಪ, ವಯಸ್ಸು 49 ವರ್ಷ,
ಇಬ್ಬರು ವಾಸಃ ಮಸಣಿಕೆರೆ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ದಿಃ 11-12-2021 ರಂದು ಚಾ.ಸಾ.1 ರವರು ಮಸಣಿಕೆರೆ ಗ್ರಾಮದ ವಾಸಿ ರತ್ನಮ್ಮ ಕೋಂ ಮಹೇಶ್ವರಪ್ಪ ಇವರಿಗೆ ಸೇರಿದ ಮಸಣಿಕೆರೆ ಸರ್ವೆ ನಂ.24 ರ ಜಮೀನಿನಲ್ಲಿ ಇರುವ ಶ್ರೀಪದ್ಮಗಿರಿ ಚೌಡೇಶ್ವರಿ ದೇವಸ್ಥಾನಕ್ಕೆ ಮದ್ಯಾಹ್ನ ಸುಮಾರು 12.30 ರಿಂದ 1.00 ಗಂಟೆಯ ಸಮಯದಲ್ಲಿ ಹೋಗಿ ದೇವಸ್ಥಾನದ ದೇವರ ಗರ್ಭಗುಡಿ ಬಾಗಿಲ ಬಳಿ ನಿಂತುಕೊಂಡು ದೇವರಿಗೆ ಕೈ ಮುಗಿಯುತ್ತಿರುವಾಗ ಅಲ್ಲಿಗೆ ಬಂದ 2 ಮತ್ತು 3 ನೇ ಆರೋಪಿತರಾದ ನೀವು 1 ನೇ ಆರೋಪಿಯ ಜೊತೆ ಸೇರಿ ಚಾ.ಸಾ.1 ರವರನ್ನು ಉದ್ದೇಶಿಸಿ ಏಕಾ ಏಕಿ ನೀನು ಮಾದಿಗ ಜನಾಂಗದವನು, ನೀನು ದೇವವಸ್ಥಾನದ ಒಳಗೆ ಬರುವ ಹಾಗೇ ಇಲ್ಲ ಎಂದು ಜಾತಿ ಹಿಡಿದು ಅವಮಾನ ಪಡಿಸಿದ್ದಕ್ಕೆ, ಚಾ.ಸಾ.1 ರವರು ಯಾಕೆ ದೇವಸ್ಥಾನದ ಒಳಗೆ ಬರಬಾರದು, ಇದು ಸಾರ್ವಜನಿಕ ದೇವಸ್ಥಾನ ಅಲ್ಲವೇ ಎಂದು ಕೇಳಿದ್ದಕ್ಕೆ ಇದೇನು ನಿನ್ನಪ್ಪ ಕಟ್ಟಿಸಿದ್ದಾನಾ ಸೂಳೇಮಗನೇ, ನಾನು ಯಾರಿಗೆ ಹೇಳುತ್ತೇನೋ ಅವರಿಗೆ ಮಾತ್ರ ಪ್ರವೇಶ ಎಂದು ಅವಾಚ್ಯ ಶಬ್ದಗಳಿಂದ ಬೈದು, ತನ್ಮೂಲಕ ಸಾರ್ವಜನಿಕ ಶಾಂತತಾ ಭಂಗವನ್ನು ಅವರಿಂದ ಮಾಡಿಸುವ ರೀತಿಯಲ್ಲಿ ಪ್ರಚೋದಿಸಿದ್ದು, ಆ ಪ್ರಕಾರ ಕಲಂ 504 ಜೊತೆ 34 ರ ಭಾರತದ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ 2 ಮತ್ತು 3 ನೇ ಆರೋಪಿತರಾದ ನೀವು 1 ನೇ ಆರೋಪಿಯ ಜೊತೆ ಸೇರಿ ಚಾ.ಸಾ.1 ನೇಯವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಕೈಕಾಲುಗಳಿಂದ ದೂಡಾಡಿದ್ದು, ಆ ಪ್ರಕಾರ ಕಲಂ 323 ಭಾರತದ ದಂಡ ಸಂಹಿತೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

3. ಮೂರನೇಯದಾಗಿ, 2 ಮತ್ತು 3 ನೇ ಆರೋಪಿತರಾದ ನಿಮಗೆ ಚಾ.ಸಾ.1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಅವರ ಜಾತಿಯನ್ನು ಉದ್ದೇಶಿಸಿ ಸಾರ್ವಜನಿಕವಾಗಿ ಸೂಳೇಮಗನೇ ಎಂದು ಜಾತಿ ನಿಂದನೆ ಮಾಡಿದ್ದು, ಆ ಪ್ರಕಾರ ಕಲಂ 3(1)(ಆರ್), 3(1)(ಎಸ್) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

4. ನಾಲ್ಕನೇಯದಾಗಿ, 2 ಮತ್ತು 3 ನೇ ಆರೋಪಿತರಾದ ನಿಮಗೆ ಚಾ.ಸಾ.1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಅವರ ಜಾತಿಯನ್ನು ಉದ್ದೇಶಿಸಿ ಸಾರ್ವಜನಿಕವಾಗಿ ಸೂಳೇಮಗನೇ ಎಂದು ಜಾತಿ ನಿಂದನೆ ಮಾಡಿದ್ದು, ಆ ಪ್ರಕಾರ ಕಲಂ 3(2)(ವಿ-ಎ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

5. ಕೊನೆಯದಾಗಿ, 2 ಮತ್ತು 3 ನೇ ಆರೋಪಿತರಾದ ನಿಮಗೆ ಚಾ.ಸಾ.1 ರವರು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ತಿಳಿದಿದ್ದರೂ ಕೂಡ ಅವರ ಜಾತಿಯನ್ನು ಉದ್ದೇಶಿಸಿ ಸಾರ್ವಜನಿಕವಾಗಿ ಸೂಳೇಮಗನೇ ಎಂದು ಜಾತಿ ನಿಂದನೆ ಮಾಡಿ ಸಾರ್ವಜನಿಕ ಪೂಜಾ ಸ್ಥಳದಿಂದ ಹೊರಗೆ ದಬ್ಬಿ ಅವಮಾನ ಮಾಡಿದ್ದು, ಆ ಪ್ರಕಾರ ಕಲಂ 3(1)(ಜೆಡ್ಎ)(ಸಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

6. ಇಂದು 25 ನೇ ತಾರೀಖು ಮೇ ಮಾಹೆ 2025

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ,
ದಾವಣಗೆರೆ.

SC/ST No. 13/2022

ಫಿರ್ಯಾದಿದಾರರು ವಿರುದ್ಧ ಆರೋಪಿತರು

ರಾಜ್ಯದ ಪರವಾಗಿ ಚನ್ನಗಿರಿ
ಪೋಲೀಸ್ ಠಾಣೆ, ಚನ್ನಗಿರಿ

ಎ 2) ರುದ್ರಪ್ಪ ಯಾನೆ ಎಂ.ಜಿ.ರುದ್ರೇಶ
ಮತ್ತು ಇನ್ನೊಬ್ಬರು.

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ದಾವಣಗೆರೆ.

ದಿನಾಂಕ. 25-05-2026

ಆರೋಪಿತರ ಹೆಸರು ಆರೋಪಿತರ ಸಹಿ

ಎ 2) ರುದ್ರಪ್ಪ ಯಾನೆ ಎಂ.ಜಿ.ರುದ್ರೇಶ ತಂದೆ
ಮಹೇಶ್ವರಪ್ಪ,

ಎ 3) ಮೂರ್ತೆಪ್ಪ ಯಾನೆ ಜಿ.ಎಂ.ಶಿವಮೂರ್ತಿ
ತಂದೆ ಮಹೇಶ್ವರಪ್ಪ,